


# ಸಾವಿರದ ಗೋಲುಗಳ ಸರದಾರ!

■ ಪ್ರವೀಣ ಕುಲಕರ್ಣಿ

ಜಗತ್ತಿನ ಸಾರ್ವಕಾಲಿಕ ಶ್ರೇಷ್ಠ ಕ್ರೀಡಾಪಟು ಯಾರು? ಈ ಪ್ರಶ್ನೆಗೆ ಸಾಮಾನ್ಯವಾಗಿ ಎಲ್ಲ ಕಡೆಯಿಂದ ಸಿಗುವ ಉತ್ತರ 'ಮಹಮ್ಮದ್ ಅಲಿ'. ಮೊನ್ನೆಯಷ್ಟೇ ಅಗಲಿದ ಪೀಲೆ ಅವರದು ಕೂಡ ಅಲಿ ಅವರೊಂದಿಗೆ, ಅಷ್ಟೇ ಎತ್ತರದಲ್ಲಿಯೇ ನಿಲ್ಲಬಲ್ಲ ಹೆಸರು. ಪೀಲೆ ಎಂಬ ನಾಮಾಂಕಿತದಿಂದ ಜಗತ್ತಿಗೆಲ್ಲ ಚಿರಪರಿಚಿತರಾದ ಈ ಬ್ರೆಜಿಲ್ ಆಟಗಾರನ ಪೂರ್ಣ ಹೆಸರು, ಎಡ್ಸನ್ ಅರಾಂಟ್ಸ್ ಡು ನಾಸಿಮೆಂಟೊ.

ಫುಟ್‌ಬಾಲ್‌ನಲ್ಲಿ ಪೀಲೆ ಮಾಡಿದ ಸಾಧನೆಯನ್ನು ಸಾಮಾನ್ಯ ಸಂಗತಿಗಳ ಜತೆ ಹೋಲಿಕೆಮಾಡಲು ಸಾಧ್ಯವೇ ಇಲ್ಲ. ಅದು ವಿಶ್ವ ಚಾಂಪಿಯನ್ ಜಾರ್ಜ್ ಫೋರ್‌ಮನ್ ಅವರನ್ನು ಮೊದಲ ಬಾರಿಗೆ ಸೋಲಿಸಿದ ಅಲಿ ಅವರ 'ರುಂಬಲ್ ಇನ್ ದಿ ಜಂಗಲ್' ಖ್ಯಾತಿಯ ಬಾಕ್ಸಿಂಗ್ ಪಂದ್ಯದ ಸಾಧನೆಗೆ, ಅಂತೆಯೇ ಹಿಟ್ಲರ್‌ನ ಕಾಲಕ್ಕೆ ನಡೆದ ಒಲಿಂಪಿಕ್ಸ್‌ನಲ್ಲಿ ಜೆಸ್ಸಿ ಓವನ್ಸ್ ಅವರ ಯಶಸ್ಸಿನ ಓಟಕ್ಕೆ ಸರಿಸಾಟಿಯಾಗಿ ನಿಲ್ಲುವಂತಹದ್ದು.

ರೋಲ್ಯಾಂಡ್ ಗ್ಯಾರೊಸ್‌ನಲ್ಲಿ ರಫೆಲ್ ನಾಡಲ್, ಆಗಸ್ಟಾದಲ್ಲಿ ಟೈಗರ್ ವುಡ್ಸ್, ಬೀಜಿಂಗ್‌ನಲ್ಲಿ ಉಸೇನ್ ಬೋಲ್ಟ್, ಲಂಡನ್‌ನಲ್ಲಿ ಮೈಕೆಲ್ ಫೆಲ್ಪ್ಸ್ ಮಾಡಿದ ಸಾಧನೆಯನ್ನು ಸರಿಗಟ್ಟಬಲ್ಲುದು ಪೀಲೆ ಅವರ ಫುಟ್‌ಬಾಲ್. ಫುಟ್‌ಬಾಲ್‌ನ ಈ ತಾರೆಯ ಬತ್ತಳಿಕೆಯಲ್ಲಿ ಮೂರು ವಿಶ್ವಕಪ್‌ಗಳಿವೆ. 1200ಕ್ಕೂ ಅಧಿಕ ಗೋಲುಗಳಿವೆ (ಅದರಲ್ಲಿ ಫಿಫಾ ಮಾನ್ಯತೆಯ ಗೋಲುಗಳ ಸಂಖ್ಯೆಯೇ 784ರಷ್ಟಿದೆ).

ಫುಟ್‌ಬಾಲ್‌ನ ಈ ದಂತಕಥೆಯತ್ತ ಅಭಿಮಾನಿಗಳ ಮಹಾಪೂರ ಹೇಗೆ ಹರಿಯಿತು ಎಂದರೆ ಖಂಡಗಳ ಗಡಿಗಳೇ ಅಳಿಸಿಹೋಗಿದ್ದವು. ತಮ್ಮ ರಾಜಕೀಯ ನಿಲುವುಗಳಿಗಾಗಿ ದೊಡ್ಡ ವಿರೋಧವನ್ನೂ ಅವರು ಎದುರಿಸಿದ್ದಿದೆ. ಫುಟ್‌ಬಾಲ್‌ನ ವಾಣಿಜ್ಯೀಕರಣಕ್ಕೆ ಪೀಲೆಯೇ ಸಾಧನವಾದರು ಎಂಬ ಮಾತನ್ನೂ ಅಲ್ಲಗಳೆಯುವಂತಿಲ್ಲ. 1950ರ ದಶಕದಲ್ಲಿ ವಿಶ್ವಕಪ್ ಫುಟ್‌ಬಾಲ್ ಪಂದ್ಯಗಳು ಟಿ.ವಿ.ಯಲ್ಲಿ ಪ್ರಸಾರವಾಗುವುದು ಶುರುವಾದ ಸಂದರ್ಭದಲ್ಲಿ ಪ್ರೇಕ್ಷಕರನ್ನು ಸೂಜಿಗಲ್ಲಿನಂತೆ ಸೆಳೆದಿದ್ದು ಇದೇ ಪೀಲೆ ಆಟ. ಅಂದಹಾಗೆ, ಈ ಆಟಗಾರನೆಂದರೆ ಕೋಲ್ಕತ್ತ ಜನರ ಪಾಲಿಗೆ ದೇವರಿದ್ದಂತೆ. ಭಾರತದ ಈ ಫುಟ್‌ಬಾಲ್ ತವರಿಗೆ ಅವರು ಮೂರು ಬಾರಿ (1977, 2015, 2018) ಭೇಟಿ ಕೊಟ್ಟಿದ್ದರು.

ಮಿತಿಮೀರಿದ ಭ್ರಷ್ಟಾಚಾರ, ಮೇಲಿಂದ ಮೇಲೆ ನಡೆದ ಮಿಲಿಟರಿ ದಂಗೆ, ಸ್ವಾತಂತ್ರ್ಯದಮನ ಮೊದಲಾದ ಸಂಕಟಗಳನ್ನು ಉಡಿಯಲ್ಲಿಯ ಉರಿಯಂತೆ ಕಟ್ಟಿಕೊಂಡಿದ್ದ ದೇಶದ ಚಿತ್ರಣವನ್ನೇ ಬದಲಾಯಿಸುವಂತೆ 1958ರಲ್ಲಿ ಪೀಲೆ ಮೊದಲ ವಿಶ್ವಕಪ್ ಹೊತ್ತು ತಂದರು. ಆಗ ಅವರಿಗೆ ಕೇವಲ 17 ವರ್ಷ. ಆ ವಿಶ್ವಕಪ್ ಟೂರ್ನಿಯ ನಾಲ್ಕು ಪಂದ್ಯಗಳಲ್ಲಿ ಆರು ಗೋಲುಗಳನ್ನು ಬಾರಿಸಿದ್ದರು ಪೀಲೆ. ಫೈನಲ್‌ನಲ್ಲಿ ಬಂದ ಎರಡು ಗೋಲುಗಳೂ ಅದರಲ್ಲಿ ಸೇರಿದ್ದವು. ಮುಂದಿನ ಒಂದೂವರೆ ದಶಕದಲ್ಲಿ ಫುಟ್‌ಬಾಲ್ ಅಂಗಳ ಎಂತಹ ರೋಚಕ ಅಧ್ಯಾಯಗಳಿಗೆ ಸಾಕ್ಷಿಯಾಗಲಿದೆ ಎನ್ನುವುದರ ಝಲಕ್ ಆಗಲೇ ತೋರಿಸಿದ್ದರು ಈ ಆಟಗಾರ.

ಫಿಫಾದಿಂದ ಸಾರ್ವಕಾಲಿಕ ಶ್ರೇಷ್ಠ ಆಟಗಾರ ಎಂಬ ಹಿರಿಮೆಗೆ ಪಾತ್ರವಾದ ಪೀಲೆ, ಬ್ರೆಜಿಲ್‌ನಲ್ಲಿ ಅಧಿಕಾರದಲ್ಲಿದ್ದವರ ಬಾಲಬಡುಕನಾಗಿ ಕೆಟ್ಟ ಹೆಸರನ್ನೂ ಪಡೆದವರು. 1970ರ ವಿಶ್ವಕಪ್ ಫುಟ್‌ಬಾಲ್ ಟೂರ್ನಿಗೆ ಹೋಗುವ ಮುನ್ನ, ಆ ವೇಳೆಗೆ ಬ್ರೆಜಿಲ್‌ನ ಸರ್ವಾಧಿಕಾರಿ ಎನಿಸಿದ್ದ ಅಧ್ಯಕ್ಷ ಎಮಿಲೊ ಗರಾಸ್ಟಸ್ ಮೇಡಿಕಿ ಅವರೊಂದಿಗೆ ವೇದಿಕೆ ಹಂಚಿಕೊಂಡು ವಿವಾದವನ್ನು ಮೈಮೇಲೆ ಎಳೆದುಕೊಂಡರು. 1964ರಲ್ಲಿ ಬ್ರೆಜಿಲ್ ಬಹುದೊಡ್ಡ ಕ್ರಾಂತಿಗೆ ಸಾಕ್ಷಿಯಾಗಿತ್ತು. ನಂತರದ ವರ್ಷಗಳಲ್ಲಿ ಆ ದೇಶದ ಆಡಳಿತ ಮಿಲಿಟರಿ ಸುಪರ್ದಿಗೆ ಒಳಪಟ್ಟಿತ್ತು. ನೋವು ಸಂಕಟಗಳಿಂದ ಬೇಯುತ್ತಿದ್ದ ಜನರ ಎದೆಗೆ ವಿಶ್ವಕಪ್ ಗೆಲ್ಲುವ ಮೂಲಕ ತಂಪೆರೆದವರು ಕೂಡ ಇದೇ ಪೀಲೆ.

1960ರ ದಶಕದಲ್ಲಿ ನೈಜೀರಿಯಾದ ಅಂತರ್ಯುದ್ಧದ ಸಮಯದಲ್ಲಿ ಎರಡೂ ಬಣಗಳ ನಡುವೆ 48 ಗಂಟೆಗಳ ಕದನ ವಿರಾಮವನ್ನು ತರಲು ಕಾರಣವಾದ ಆಟಗಾರ ಕೂಡ ಇವರಾಗಿದ್ದರು. ಹೇಗೆ ಗೊತ್ತೆ? ಲಾಗೋಸ್‌ನಲ್ಲಿ ನಡೆದ ಪ್ರದರ್ಶನ ಪಂದ್ಯದಲ್ಲಿ ಪೀಲೆ ಭಾಗವಹಿಸಿದ್ದರಿಂದ ಆ ಆಟವನ್ನು ನೋಡುವ ಸಲುವಾಗಿ ಎರಡೂ ಬಣಗಳು ಎರಡು ದಿನಗಳ ಕದನವಿರಾಮ ಘೋಷಿಸಿದ್ದವು!

ಭಾರತಕ್ಕೆ ಮೊದಲ ಸಲ ಭೇಟಿ ನೀಡಿದ್ದಾಗ ಮೋಹನ್ ಬಾಗನ್ ಮತ್ತು ನ್ಯೂಯಾರ್ಕ್ ಕಾಸ್ಮೊಸ್ ನಡುವಿನ ಪಂದ್ಯ ಆಯೋಜನೆಗೆ ಕಾರಣರಾದವರೂ ಪೀಲೆ. ಕೋಲ್ಕತ್ತದ ಈಡನ್ ಗಾರ್ಡನ್ಸ್‌ನಲ್ಲಿ ಅವರು ಅರ್ಧ ಗಂಟೆ ಆಡಿದ್ದರು. ಆ ಆಟವನ್ನು 80 ಸಾವಿರ ಅಭಿಮಾನಿಗಳು ಮೂಕವಿಸ್ಮಿತರಾಗಿ ನೋಡಿದ್ದರು.

'ಫುಟ್‌ಬಾಲ್‌ನ ಈ ದೇವರ'ನ್ನು ಜಗತ್ತು ಆರಾಧಿಸಿದರೂ ಅವರ ವಿವಾದಾತ್ಮಕ ಹೇಳಿಕೆಗಳಿಗಾಗಿ ತೀವ್ರವಾಗಿ ಟೀಕಿಸದೆ ಬಿಟ್ಟಿಲ್ಲ. ಮೆಸ್ಸಿಯನ್ನು ಸಾಮಾನ್ಯ ಆಟಗಾರ ಎಂದು ತುಚ್ಛೀಕರಣ ಮಾಡಿದ್ದ ಪೀಲೆ, ಅದಕ್ಕಾಗಿ ಟೀಕೆ ಎದುರಿಸಿದ್ದರು. ಆದರೆ, ಮೆಸ್ಸಿ ಸಾಧನೆ ಮೇಲೆ ಸಾಧನೆ ಮಾಡುತ್ತಾ ಹೋದಂತೆ, ಅವರೊಬ್ಬ ಮಹಾನ್ ಆಟಗಾರ ಎಂದು ಬಣ್ಣಿಸಿದ್ದರು.

ಈ ಫುಟ್‌ಬಾಲ್ ದೊರೆಯ ನಿರ್ಗಮನವಾಗಿದೆ. ಆದರೆ, ಅವರ ವಿವಾದಿತ ಪ್ರಕರಣಗಳಿಗಿಂತ ಕಾವ್ಯಾತ್ಮಕವಾಗಿದ್ದ ಆಟದ ಮೂಲಕ ಜನಮಾನಸದಲ್ಲಿ ಅವರು ಉಳಿದಿದ್ದಾರೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65